ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಅಂಕೋಲಾ

ಸಿಸಿ ನಂಬರ. 1069/2021

ಸಿ ಡಬ್ಲ್ಯೂ-6

ಪಿ ಡಬ್ಲ್ಯೂ- 4

ದಿಃ 09-03-2023 ರಂದು ಸಾಕ್ಷಿಯನ್ನು ಪುನಹ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲು ಆರೋಪಿಪರ ವಕೀಲರಾದ ಶ್ರೀ. ವಿ.ವಿ.ಎಸ್. ರವರಿಂದ

ನಾವು ಕಾರವಾರದಿಂದ ಸಂಜೆ 06.00 ಘಂಟೆಗೆ ಬಿಟ್ಟಿರುತ್ತೇವೆ. ಹಾರವಾಡ ಕ್ರಾಸ್ ಕಾರವಾರದಿಂದ ಅಂದಾಜು 25 ಕಿ.ಮಿ. ದೂರವಿರುತ್ತದೆ. ಮೃತ ರವಿಯವರ ಡಿಸ್ಕವರಿ ಬೈಕ್ ಹೊಸದಾಗಿರುತ್ತದೆ. ಘಟನಾ ದಿನದಂದು ಮಳೆ ಬರುತ್ತಿರಲಿಲ್ಲ. ಆ ದಿನ ರಾತ್ರಿ ಮೃತ ರವಿಯವರಿಗೆ ತುರ್ತಾಗಿ ಬೆಂಗಳೂರಿಗೆ ಹೋಗಬೇಕಾಗಿರುತ್ತದೆ ಎಂದರೆ ಸರಿಯಲ್ಲ. ಹಾರವಾಡ ಕ್ರಾಸ್ ಹತ್ತಿರ ಮನೆಗಳು ಇದ್ದು, ಮನೆಗಳು ಕಚೇರಿ ಹಾಗೂ ಜನವಸತಿ ಪ್ರದೇಶ ಇರುತ್ತದೆ ಎಂದರೆ ಸರಿ. ಹಾರವಾಡ ಕ್ರಾಸ್ ಹತ್ತಿರ ಬಂದಾಗ ನಾವು ಟಿಪ್ಪರ್ ವಾಹನದ ಸುಮಾರು 30 ಫೂಟ್ ಹಿಂದುಗಡೆ ಇರುತ್ತೇವೆ. ಟಿಪ್ಪರ್ ನ ಮುಂದಿನ ಬಲಭಾಗದ ಬಂಪರ್ ಬೈಕಿಗೆ ತಾಗಿರುತ್ತದೆ. ಟಿಪ್ಪರ್ ವಾಹನವು ಎಡಭಾಗದಲ್ಲಿ ಹೋಗುತ್ತಿದ್ದು ನಾವು ಅದರ ಬಲಭಾಗದಲ್ಲಿ ಹೋಗುತ್ತಿದ್ದೇವು. ನಾವು ಅದನ್ನು ಹಿಂದಿಕ್ಕಲು ಪ್ರಯತ್ನ ಪಟ್ಟಿರುವುದಿಲ್ಲ. ಟಿಪ್ಪರ್ ವಾಹನವು ಅಚನಾಕ್ ಆಗಿ ತಿರುಗಿಸಿದರಿಂದ ಡಿಕ್ಕಿ ಹೊಡೆದಿರುತ್ತದೆ. ನಮ್ಮ ವಾಹನದ ಹ್ಯಾಂಡಲ್ ಗೆ ಟಿಪ್ಪರ್ ನ ಬಂಪರ್ ತಾಗಿರುತ್ತದೆ. ನಮ್ಮ ಬೈಕ್ ಡಿವೈಡರ್ ನ ಯುಟಾರ್ನ ದಿಂದ ಸ್ವಲ್ಪ ಹಿಂದೆ ಇರುತ್ತದೆ. ಡಿವೈಡರ್ ದಿಂದ ಸುಮಾರು 8 ಅಡಿ ಒಳಗಡೆ ಇರುತ್ತೇವೆ. ನಮ್ಮಿಬ್ಬರಿಗೂ ಪೆಟ್ಟಾಗಿರುತ್ತದೆ ಎಂದರೆ ಸರಿ. ಸಾಕ್ಷಿಗೆ ಒಂದು ಫೋಟೊವನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿ ತಾವು ಇರುವುದನ್ನು ಗುರುತಿಸುತ್ತಾರೆ. ಅದನ್ನು ನಿಡಿ-1 ಎಂದು ಗುರುತಿಸಲಾಯಿತು. ಸದರಿ ಫೋಟೋವನ್ನು ಅಪಘಾತದ ಸಮಯದಲ್ಲಿ ತೆಗೆಯಲಾಗಿದೆ. ಸದರಿ ಫೋಟೊದಲ್ಲಿ ರಕ್ತ ಬಂದಿದ್ದು, ಪ್ರಜ್ಞಾಹಿನ ಸ್ಥಿತಿಯಲ್ಲಿ ಇರುತ್ತೇನೆ ಎಂದರೆ ಸರಿ. ಅದೇ ದಿನ ರಾತ್ರಿ 09.00 ಘಂಟೆಯ ಸುಮಾರಿಗೆ ಪ್ರಜ್ಞೆ ಬಂದಿರುತ್ತದೆ. ಸುಮಾರು 8 ದಿನಗಳ ಕಾಲ ಆಸ್ಪತ್ರೆಯಲ್ಲಿ ದಾಖಲಾಗಿರುತ್ತೇನೆ. ಸಾಕ್ಷಿಗೆ 6 ಫೋಟೊಗಳನ್ನು ತೋರಿಸಲಾಗಿ ಅವುಗಳನ್ನು ಸಾಕ್ಷಿಯು ಗುರುತಿಸಿದ್ದು, ನಿಡಿ-2 ರಿಂದ 7 ಎಂದು ಗುರುತಿಸಲಾಯಿತು. ನಿಡಿ-2 ರ ಫೋಟೊದಲ್ಲಿ ಪಾದಚಾರಿ ಗುರುತಿನ ಭಾಗದಲ್ಲಿ ರಸ್ತೆಯು ಅಗಲವಾಗಿದ್ದು, ಯು ಟರ್ನ್ ಗೆ ಬಿಟ್ಟ ಸ್ಥಳದ ನಂತರ ಡಿವೈಡರ್ ಗೆ ಇರುವ ರಸ್ತೆಯು ಚಿಕ್ಕದಾಗಿರುತ್ತದೆ ಎಂದರೆ ಸರಿ. ಪಾದಚಾರಿ ಗುರುತಿನ ಭಾಗದಲ್ಲಿ ಸ್ಟಾಪ್ ಅಂತ ಬರೆದಿರುವುದನ್ನು ನಾನು ಗಮನಿಸಿರುವುದಿಲ್ಲ. ನಿಪಿ-4 ರ ಫೋಟೊದಲ್ಲಿ ಸ್ಟಾಪ್ ಅಂತ ಬರೆದಿರುತ್ತಾರೆ ಎಂದರೆ ಸರಿ. ನಿಪಿ-4 ರಲ್ಲಿ ಬಲಕ್ಕೆ ಹೋಗಲು ಬಾಣದ ಗುರುತು ಇರುತ್ತದೆ ಎಂದರೆ ಸರಿ. ನಿಪಿ-7 ರ ಫೋಟೊದಲ್ಲಿ ಸೀದಾ ಹೋಗಲು ಒಂದು ಗುರುತು ಇದ್ದು, ಬಲಕ್ಕೆ ಹೋಗಲು ಒಂದು ಗುರುತು ಮಾಡಿರುತ್ತಾರೆ ಎಂದರೆ ಸರಿ. ನಾವು ಕಾರವಾರದಿಂದ ಅಂಕೋಲಾಕ್ಕೆ ಹೋಗಬೇಕಾದರೆ ರಸ್ತೆಯ ಬಲಭಾಗದಲ್ಲಿ ಡಿವೈಡರ್ ಗಿಂತ ಮುಂಚೆ ಬಿದಿರುತ್ತೇವೆ. ರಾಷ್ಟ್ರೀಯ ಹೇದ್ದಾರಿಯ ಮಧ್ಯ ರಸ್ತೆಯಲ್ಲಿ ಬಿಳಿ ಪಟ್ಟಿಯನ್ನು ಹಾಗೂ ರೆಡಿಯಮ್ ಇರುವ ಚೂರುಗಳನ್ನು ಕೂರಿಸಿರುತ್ತಾರೆ ಎಂದರೆ ಸರಿ. ನಾವು ಯು ಟರ್ನ್ ತೆಗೆದುಕೊಳ್ಳುವ ಜಾಗದಲ್ಲಿ ಬಿದ್ದಿರುತ್ತೇವೆ. ನಿಡಿ-1 ರಲ್ಲಿ ಈ ಮೇಲೆ ಹೇಳಿದಂತ ಬಿಳಿಪಟ್ಟಿ ಹಾಗೂ ರೆಡಿಯಮ್ ಚೂರನ್ನು ತೋರಿಸಲಾಗಿದೆ ಎಂದರೆ ಸರಿ. ನಾನು

ಅಂಕೋಲಾ ಪೊಲೀಸರ್ ಠಾಣೆಯ ಎ.ಎಸ್.ಐ. ಇವರಿಗೆ ಅಪಘಾತವಾದ 15 ದಿನಗಳ ನಂತರ ಸಂಜೆ 06.00 ಘಂಟೆಗೆ ಹೇಳಿಕೆಯನ್ನು ನೀಡಿರುತ್ತೇನೆ. ನಾನು ಪೊಲೀಸರ ಮುಂದೆ " ಅಪಘಾತ ಪಡಿಸಿದ ಟಿಪ್ಪರ್ ವಾಹನ ನಂ. ಎ.ಆರ್.-02-2941 ...................... .ಅಂತ ತಿಳಿಯಿತು " ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ. ಅದನ್ನು ನಿಶಾನೆ ಡಿ-8 ಎಂದು ಗುರುತಿಸಲಾಯಿತು. ಪೊಲೀಸರ ಮುಂದೆ ಆರೋಪಿಯನ್ನು ಅಪಘಾತ ಪಡಿಸಿದ ದಿನದಂದು ನೋಡಿದ್ದೇನೆ ಹಾಗೂ ಆತನನ್ನು ಗುರುತಿಸುತ್ತೇನೆ ಎಂದು ಹೇಳಿಕೆಯನ್ನು ಕೊಡಲು ತೊಂದರೆ ಇತ್ತೆ ಎಂದು ಕೇಳಿದಕ್ಕೆ ಸಾಕ್ಷಿಯು ತೊಂದರೆ ಇರಲಿಲ್ಲ ಎಂದು ನುಡಿಯುತ್ತಾರೆ. ಆರೋಪಿಯನ್ನು ಅಪಘಾತದ ಮೊದಲು ನೋಡಿರುವುದಿಲ್ಲ ನಂತರವೂ ಸಹ ನೋಡಿದ್ದು ಇರುವುದಿಲ್ಲ. ಸಾಮಾನ್ಯವಾಗಿ ಟಿಪ್ಪರ್ ಗಿಂತ ಬೈಕ್ ವೇಗವಾಗಿ ಓಡುತ್ತದೆ ಎಂದರೆ ಸರಿ. ಆ ದಿನದಂದು ನಮ್ಮ ಬೈಕ್ ಸುಮಾರು 45-50 ಕಿ.ಮಿ. ವೇಗವಾಗಿತ್ತು. ನನ್ನ ಏರೀಯಾ ಸೀ ಬರ್ಡ್ ಕಾಲೋನಿಯಲ್ಲಿರುತ್ತದೆ. ಚಾಸಾ-7 ಮತ್ತು 8 ರವರ ಮನೆಯು ನಮ್ಮ ಮನೆಯ ಪಕ್ಕ ಇರುತ್ತದೆ. ಅವರ ಪರಿಚಯ ನನಗೆ ಇರುತ್ತದೆ. ಚಾಸಾ-3 ರವರ ಪರಿಚಯ ಇರುವುದಿಲ್ಲ. ಮೃತ ರವಿ ಇವರು ಪರಿಹಾರಕ್ಕೆ ಅರ್ಜಿಯನ್ನು ಹಾಕಿ ಪರಿಹಾರ ತೆಗೆದುಕೊಂಡಿದ್ದು, ನಾನು ಸಹ ಅರ್ಜಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ. ನಾನು ಸಹ ಪರಿಹಾರ ಪಡೆದುಕೊಳ್ಳ ಬೇಕೆಂದು ಆಶಿಸುತ್ತೇನೆ ಎಂದರೆ ಸರಿ. ಚಾಸಾ-7 ಮತ್ತು 8 ಇವರಿಗೆ ಅಪಘಾವಾದ ನಂತರ ವಿಷಯ ತಿಳಿದಿರುತ್ತದೆ. ಅಪಘಾತವಾದ 5 ನಿಮೀಷದ ನಂತರ ಚಾಸಾ-7 ಮತ್ತು 8 ಇವರು ಬಂದಿರುತ್ತಾರೆ. ರವಿಯು ವಾಹನವನ್ನು ಅತಿವೇಗ ಹಾಗೂ ನಿಷ್ಕಾಲಾಜಿತನದಿಂದ ಚಲಾಯಿಸುತ್ತಿದ್ದರು ಎಂದರೆ ಸರಿಯಲ್ಲ. ಟಿಪ್ಪರ್ ವಾಹನವನ್ನು ಹಿಂದಿಕ್ಕಲು ವೇಗವಾಗಿ ಬಂದಾಗ ಸದರಿ ಅಪಘಾತವು ಸಂಭವಿಸಿರುತ್ತದೆ ಎಂದರೆ ಸರಿಯಲ್ಲ. ನಮ್ಮ ವಾಹನದ ಹೆಡ್ ಲೈಟ್ ಟಿಪ್ಪರ್ ಬಂಪರ್ ಗೆ ತಾಗಿದ್ದರಿಂದ ಈ ಅಪಘಾತ ಸಂಭವಿಸಿರುತ್ತದೆ ಎಂದರೆ ಸಾಕ್ಷಿಯು ಟಿಪ್ಪರ್ ವಾಹನವು ಅಡ್ಡ ಬಂದಿದ್ದರಿಂದ ಅಪಘಾತ ಆಗಿರುತ್ತದೆ ಎಂದು ನುಡಿಯುತ್ತಾರೆ. ಅಪಘಾತದ ಸಮಯದಲ್ಲಿ ಆರೋಪಿಯು ಟಿಪ್ಪರ್ ವಾಹನದ ಚಾಲಕನಾಗಿರುವುದಿಲ್ಲ ಎಂದರೇ ಸರಿಯಲ್ಲ ಹಾಗೂ ಆರೋಪಿಯ ವೇಗ ಹಾಗೂ ನಿಷ್ಕಾಲಾಜಿತನದಿಂದ ಯಾವುದೇ ಅಪಘಾತ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಪರಿಯಸ್ಥರನ್ನು ಜೊತೆ ಮಾಡಿಕೊಂಡು ಈ ಸುಳ್ಳು ಪ್ರಕರಣವನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಕರಣಕ್ಕೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ನನನ್ನು ಕರೆದುಕೊಂಡು ಹೋದ ಆ್ಯಂಬುಲೆನ್ಸ ಸಂಖ್ಯೆಯನ್ನು ಹೇಳಲು ಆಗುವುದಿಲ್ಲ. ನನಗೆ ಆ ಸಮಯದಲ್ಲಿ ಪ್ರಜ್ಞೆ ಇರಲಿಲ್ಲ. ಟಿಪ್ಪರ್ ವಾಹನಕ್ಕೆ ನಂಬರ್ ಪ್ಲೇಟ್ ಇರುತ್ತದೆ. ತೂಗಾಡುವ ತಗಡಿನ ಪ್ಲಟ್ ಆಗಿರುತ್ತದೆ. ಎಷ್ಟು ಕಡೆ ನಂಬರ್ ಬರೆದಿರುತ್ತದೆ ಎಂದು ನೋಡಿರುವುದಿಲ್ಲ. ಮತ್ತೆನು ಬರೆದಿರುತ್ತಾರೆ ಎಂದು ನೋಡಿರುವುದಿಲ್ಲ. ವಾಹನದ ಸಂಖ್ಯೆಯನ್ನು ಸಹ ಆ ಸಮಯದಲ್ಲಿ ನೋಡಿರುವುದಿಲ್ಲ ಹಾಗೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ).

ಓ ಹೇ ಕೇ ಸರಿ ಇದೆ

ಹೆಚ್ಚುವರಿ ಜೆ.ಎಂ.ಎಫ್.ಸಿ., ಅಂಕೋಲಾ.